ಶಬ್ದ ಕೇಳಿ ಬರತೊಡಗಿತು. ತಮಟೆ ಬಡಿತ ಕೇಳಿಯೂ ನಿರ್ಲಕ್ಷ್ಯದಿಂದ ಕುರ್ಚಿಗಂಟಿಯೇ ಕೂತಿದ್ದ ಕೆಲವೇ ಕೆಲವರನ್ನು ಬಿಟ್ಟರೆ, ಅಲ್ಲಿದ್ದ ಬಹುತೇಕ ಮಂದಿ ಬಾಯಲ್ಲಿ ತುತ್ತನ್ನು ತುರುಕಿಕೊಂಡೇ ಸಡಗರದಿಂದ ಕಿಟಕಿಯ ಬಳಿ ಓಡೋಡಿ ಹೋದರು.

ಡಂಗುರ ಸಾರುವವನು ಜೋರಾಗಿ ಕೂಗಿ ಕೂಗಿ ಹೇಳಿದ.

"ಈ ಮೂಲಕ ಗುಡರ್‌ವೀಲ್‌ನ ನಿವಾಸಿಗಳೆಲ್ಲರಿಗೆ ಮತ್ತು ಸುತ್ತಮುತ್ತಲ ಪ್ರಾಂತ್ಯದ ಮಹಾಜನರಿಗೆ ತಿಳಿಸುವುದು ಏನೆಂದರೆ, ಇವತ್ತು ಬೆಳಗ್ಗೆ ಸುಮಾರು ಒಂಬತ್ತರಿಂದ ಹತ್ತು ಗಂಟೆಯ ಅವಧಿಯಲ್ಲಿ ಒಂದು ಕಪ್ಪು ಬಣ್ಣದ ಪಾಕೆಟ್ ಬುಕ್ ಕಳೆದುಹೋಗಿದೆ. ಅದರಲ್ಲಿ ಐನೂರು ಫ್ರಾಂಕ್‌ಗಳು ಮತ್ತು ಕೆಲವೊಂದು ಪ್ರಮುಖ ದಾಖಲೆಗಳು, ಪತ್ರಗಳು ಇರುತ್ತವೆ. ಈ ಪಾಕೆಟ್ ಸಿಕ್ಕಿದವರು ಕೂಡಲೇ ಮೇಯರ್ ಆಫೀಸಿಗೆ ಅಥವಾ ಮ್ಯಾನ್ನೆವೀಲ್ ಪಟ್ಟಣದ ಮಿ. ಹೌಲ್ ಬ್ರಿಕಿ ಅವರಿಗೆ ತಲುಪಿಸ ತಕ್ಕದ್ದು. ಇದನ್ನು ತಂದು ಕೊಟ್ಟವರಿಗೆ ಇಪ್ಪತ್ತು ಫ್ರಾಂಕ್‌ಗಳ ಆಕರ್ಷಕ ಬಹುಮಾನವನ್ನು ಘೋಷಿಸಲಾಗಿದೆ."

ತನ್ನ ಕರ್ತವ್ಯವನ್ನು ಮುಗಿಸಿ ಡಂಗುರದವನು ಹೊರಟುಹೋದ. ಮತ್ತೆ ಕೆಲ ನಿಮಿಷಗಳ ಅನಂತರ ದೂರದಲ್ಲೆಲ್ಲೋ ತಮಟೆಯ ಭಾರವಾದ ಸದ್ದೂ, ಅವನ ಅಸ್ಪಷ್ಟ ಮಾತುಗಳೂ ವಾತಾವರಣದಲ್ಲಿ ಮಸುಕು ಮಸುಕಾಗಿ ತೇಲಿಬಂದವು.

ಇದೀಗ ಜನರ ಚರ್ಚೆ ಹೆಚ್ಚಿನ ಹುರುಪಿನಿಂದ ಹೊಸ ವಿಷಯದ ಸುತ್ತ ಸುತ್ತತೊಡಗಿತು. ಪರ್ಸನ್ನು ಕಳೆದುಕೊಂಡ ವ್ಯಕ್ತಿಗೆ ಅದು ಮತ್ತೆ ಸಿಗಬಹುದಾದ ಅಥವಾ ಸಿಗದೆಯೇ ಹೋಗಬಹುದಾದ ಸಾಧ್ಯತೆಗಳ ಬಗ್ಗೆ ವಿಶ್ಲೇಷಣೆ ಸಾಗತೊಡಗಿತು.

ಅಂತೂ ಎಲ್ಲರ ಊಟ ಮುಗಿದು, ಅವರೆಲ್ಲ ತೃಪ್ತಿಯಾಗಿ ಕಾಫಿ ಗುಟುಕರಿಸುತ್ತಾ ಇರುವಾಗ ಬಾಗಿಲ ಬಳಿ ಪೊಲೀಸನೊಬ್ಬ ಪ್ರತ್ಯಕ್ಷನಾದ. ''ಹಾಶ್‌ಕಾಮ್ ಇಲ್ಲಿ ಇದ್ದಾನೆಯೇ?'' ದರ್ಪದಿಂದ ಅವ ವಿಚಾರಿಸಿದ.

ಉದ್ದನೆಯ ಮೇಜಿನ ಇನ್ನೊಂದು ತುದಿಯಲ್ಲಿ ಕೂತಿದ್ದ ಹಾಶ್‌ಕಾಮ್ ದಿಗಿಲಿನಿಂದ ಕೂಡಲೇ ಉತ್ತರಿಸಿದ, "ಹೌದು ಸ್ವಾಮಿ ನಾನು ಇಲ್ಲೇ ಇದ್ದೀನಿ''.

"ಹಾಗಾದ್ರೆ ಎದ್ದು ಬಾರಯ್ಯ ನನ್ನ ಜೊತೆ... ನಮ್ಮ ಮೇಯರ್ ನಿನ್ನ ಹತ್ತಿರ ಮಾತಾಡಬೇಕಂತೆ."

ಈ ಮಾತು ಕೇಳಿದೊಡನೆಯೇ ಕಂಗಾಲಾಗಿ ಬಿಟ್ಟ ಆ ವೃದ್ಧ ರೈತ. ಯಾವುದೋ ಅವ್ಯಕ್ತ ಭಯದಿಂದ ಅವನೆದೆ ಢವಗುಟ್ಟಿತು. ಕೈಲಿದ್ದ ಪುಟ್ಟ ಬಟ್ಟಲಿನ ಮದ್ಯವನ್ನು ಒಂದೇ ಗುಟುಕಿಗೆ ನುಂಗಿ ಮೇಲೆದ್ದು ಅಧೀರತೆಯಿಂದ ತಟ್ಟಾಡುತ್ತಾ ಪೊಲೀಸನ ಬಳಿಗೆ ಹೋದ. ಬೆನ್ನು ಕುತ್ತಿಗೆಗಳಂತು ಬೆಳಗಿನ ತಂತಿ ಪ್ರಕರಣದ ಅನಂತರದ ನಡಿಗೆಗಿಂತ ಹೆಚ್ಚಾಗಿ ಬಾಗಿಬಿಟ್ಟಿದ್ದವು.

"ನಡೀರಿ ಸ್ವಾಮಿ, ಅದಕ್ಕೇನಂತೆ ಹೋಗೋಣ ಮೇಯರ್ ಬಳಿ'' ಆತ್ಮಸ್ಥೈರ್ಯವನ್ನು ಕೂಡಿಸಿಕೊಳ್ಳಲು ಯತ್ನಿಸುತ್ತಾ ಕಳವಳದಿಂದ ಆ ರೈತ ಮೆಲ್ಲಗೆ ನುಡಿದ.

ಆರಾಮಕುರ್ಚಿಯೊಂದರ ತುಂಬಾ ಲೋಲನಾಗಿ ಕೂತಿದ್ದ ಮೇಯರ್ ಸಾಹೇಬ. ಹಾಶ್‌ಕಾಮ್‌ನ ಮುಖ ಕಂಡೊಡನೆ ದರ್ಪದಿಂದ ಗುಡುಗಿದ...

"ನೋಡಯ್ಯ ಮಹಾಶಯ... ಬಾನೋವಿಲ್ ನಗರಕ್ಕೆ ಹೋಗುವ ರಸ್ತೆಯಲ್ಲಿ ನೆಲದ ಮೇಲೆ ಬಿದ್ದಿದ್ದ ಪಾಕೆಟ್ ಬುಕ್ಕನ್ನು ನೀನು ಎತ್ತಿಕೊಂಡಿದ್ದೀಯೆ. ಈ ವಿಷಯ ನಮಗೆ ಅಧಿಕೃತವಾಗಿ ತಿಳಿದುಬಂದಿದೆ."

ಈ ಅನಿರೀಕ್ಷಿತ ಆಪಾದನೆಯ ಆಪತ್ತಿಗೆ ತಲ್ಲಣಿಸಿಹೋದ ಆ ಮನುಷ್ಯ. ಶರೀರವೆಲ್ಲ ಕಂಪಿಸಿಹೋಯಿತು. ಹೆದರಿಕೆಯಿಂದ ನಾಲಿಗೆ ತೊದಲಿತು...